ಸೌದಿಯಲ್ಲಿದ್ದಾನೆ. ಅವಳು ಒಬ್ಬಳೇ ಮನೆಯಲ್ಲಿರುವುದನ್ನು ತಿಳಿದು ಪುಂಡು ಪೋಕರಿಗಳು ರಾತ್ರಿ ಅವಳ ಮನೆಬಾಗಿಲು ತಟ್ಟುತ್ತಿದ್ದರು. ಒಂಟಿ ಹೆಣ್ಣು ಹೆದರಿ ಪಕ್ಕದ ಮನೆಯವರಿಗೆ ವಿಷಯ ತಿಳಿಸಿದ್ದಾಳೆ. ಅವರು ಅಂದು ರಾತ್ರಿ ಕಾವಲು ಕಾದಿದ್ದಾರೆ. ಸ್ವಾಮೀಜಿ ಬಂದು ಮೂತ್ರಶಂಕೆಗೆಂದು ಇಳಿದಾಗ ಇದು ಯಾರೋ ಪುಂಡು ಪೋಕರಿ ಎಂದು ಭಾವಿಸಿ ಕಲ್ಲೆಸೆದಿದ್ದಾರೆ. ಸ್ವಾಮೀಜಿಯ ಹಣೆಯಲ್ಲಿ ಸಣ್ಣ ಗಾಯವಾಗಿದೆ. ಕೊನೆಗದು ಕೋಮು ಗಲಭೆಗೆ ತಿರುಗಿ ಎರಡೂ ಊರು ಸುಟ್ಟುಹೋಯಿತು."

ಆ ವ್ಯಕ್ತಿ ಏನೋ ನೆನಪಾದಂತೆ ಹೇಳಿದ. "ಹೌದು. ಇದೆಲ್ಲವನ್ನೂ ಪತ್ರಿಕೆಗಳಲ್ಲಿ ಓದಿದ ನೆನಪಿದೆ. ಆಮೇಲೆ ಎರಡೂ ಊರುಗಳ ಹಿರಿಯರು ಒಟ್ಟಾಗಿ ಸ್ವಾಮೀಜಿಯವರನ್ನು ಕರೆಸಿ ಶಾಂತಿ ಸಭೆ ನಡೆಸಿದರು. ಸ್ವಾಮೀಜಿ ಮೇಲೆ ಕಲ್ಲೆಸೆದವರು ಬಹಿರಂಗ ಕ್ಷಮೆ ಕೇಳಿ ತಪ್ಪು ದಂಡ ಕಟ್ಟಿದರು. ಸ್ವಾಮೀಜಿ ತಾನು ಊರ ಹೊರಗೆ ಮೂತ್ರಶಂಕೆ ಮಾಡುತ್ತಿದ್ದರೆ ಈ ಅನಾಹುತವೇ ಸಂಭವಿಸುತ್ತಿರಲಿಲ್ಲ ಎಂದು ವಿಷಾದಿಸಿ ಇನ್ನು ಮುಂದೆ ವೈರತ್ವ ತೊರೆದು ಬದುಕಬೇಕೆಂದು ಆಶೀರ್ವಚನ ನೀಡಿದರು. ಅದಕ್ಕೂ ಮೊದಲು ಆಗಬಾರದ್ದೆಲ್ಲಾ ನಡೆದು ಹೋಗಿರಬೇಕು ಅಲ್ವಾ?"

"ನೀವು ಆಗಬಾರದ್ದು ಎಂದು ಹೇಳುವಾಗ ನೆನಪಾಯಿತು ನೋಡಿ. ಅಂದು ಸಂಜೆ ಈ ಊರಿನ ವಿವಾಹಿತ ಮಹಿಳೆಯೊಬ್ಬಳು ಈರುಳ್ಳಿ ಕೊಳ್ಳಲೆಂದು ಅಂಗಡಿಗೆ ಬಂದಿದ್ದಳು. ಊರು ಉದ್ವಿಗ್ನತೆಯಲ್ಲಿರುವಾಗ ಅವಳನ್ನು ಈರುಳ್ಳಿಗೆ ಕಳುಹಿಸಿದ ಗಂಡ ಎಂಥಾ ಸೋಂಬೇರಿಯಾಗಿರಬಹುದೆಂದು ನೀವೇ ಊಹಿಸಿ. ಅವಳು ಅಂಗಡಿಗೆ ತಲುಪಿರಲಿಲ್ಲ. ಅಷ್ಟರಲ್ಲಿ ದೊಡ್ಡ ಗುಂಪೊಂದು ಎದುರಾಯಿತು. ಅವರಲ್ಲಿ ಉರಿಯುವ ದೊಂದಿಗಳಿದ್ದವು. ಅವರು ಏನೇನೋ ಘೋಷಣೆ ಕೂಗುತ್ತಿದ್ದರು. ಅವಳು ಅವರಿಂದ ತಪ್ಪಿಸಿಕೊಳ್ಳಲೆಂದು ರಸ್ತೆಯ ಬಲಭಾಗಕ್ಕೆ ಓಡಿ ಅರ್ಧ ನಿರ್ಮಾಣದ ಕಟ್ಟಡವೊಂದರಲ್ಲಿ ಆಸರೆ ಪಡೆದಳು. ಅದೇ ಅವಳು ಮಾಡಿದ ತಪ್ಪು! ಬಲಿಷ್ಠ ಕೈಯೊಂದು ಅವಳ ಬಾಯಿ ಮುಚ್ಚಿತು. ಸಣ್ಣ ಗುಂಪೊಂದು ಅವಳನ್ನು ಎತ್ತಿಕೊಂಡು ಹೊಳೆಬದಿಗೆ ಹೋಯಿತು. ರಾತ್ರಿ ಹೊತ್ತು. ಹೊಳೆ ಬದಿಯಲ್ಲಿ ಬಿಡಾರ ಹೂಡಿದ್ದ ಸೇತುವೆ ಕಂಟ್ರಾಕ್ಟರ್ ಮೊಹಿಯುದ್ದೀನ್ ಸ್ವಲ್ಪ ದೂರದಲ್ಲಿ ಏನೋ ನಡೆಯುತ್ತಿರುವುದನ್ನು ಗಮನಿಸಿದ. ಹೆಣ್ಣಿನ ಚೀತ್ಕಾರವನ್ನೂ ಕೇಳಿದ. ಬಿಡಾರದೊಳಕ್ಕೆ ಹೋಗಿ ಮೂರು ಸೆಲ್ಲಿನ ಟಾರ್ಚು ತೆಗೆದುಕೊಂಡು, ಬಲವಾದ ದೊಣ್ಣೆ ಕೈಗೆತ್ತಿಕೊಂಡು ಸುವ್ವರ್ ಕೇ ಬಚ್ಚೇ, ನಿಮ್ಮನ್ನು ಗುಂಡಿಟ್ಟು ಕೊಲ್ಲುತ್ತೇನೆ. ದೌಡೋ... ಎಂದು ಅಬ್ಬರಿಸುತ್ತಾ ಧಾವಿಸಿದ. ಗುಂಪಿನ ಕೆಲವರು ಅಷ್ಟರಲ್ಲಿ ಮಾಡಬಾರದ್ದನ್ನು ಮಾಡಿದ್ದರಂತೆ. ಮೊಹಿಯುದ್ದೀನ್‌ನ ಗಂಡು ಸ್ವರಕ್ಕೆ ಹೆದರಿ ಗುಂಪು ಓಡಿತು. ಅವಳು ನಗ್ನಳಾಗಿ ಮೂರ್ಛೆತಪ್ಪಿ ಬಿದ್ದುಕೊಂಡಿದ್ದಳು. ಅವನು ಅವಳ ಬಟ್ಟೆಯನ್ನು ಅವಳ ಮೇಲೆಸೆದ. ಬಿಡಾರಕ್ಕೆ ಹೋಗಿ ನೀರು ತಂದು ಅವಳನ್ನು ಎಬ್ಬಿಸಿ ಕುಡಿಸಿದ. ಅವಳ ಏನು ಎತ್ತಗಳನ್ನು ವಿಚಾರಿಸಿ ಗಂಡನ ಮನೆಗೆ ಕರೆತಂದ."

"ಗಂಡ ಅವಳನ್ನು ಸ್ವೀಕರಿಸಬೇಕಲ್ಲವೇ?"

"ಎಲ್ಲಿಂದ ಬಂತು ಸರ್? 'ನೀನು ನಾಯಿ ಮುಟ್ಟಿದ ಮಡಕೆ', ನನಗಿವಳು ಬೇಡ ಎಂದುಬಿಟ್ಟ. ಆಗ ಮೊಹಿಯುದ್ದೀನ್ ನೀವು ಹಾಗೆ ಹೇಳಬಾರದು. ಅದರಲ್ಲಿ ಅಮ್ಮನ ತಪ್ಪೇನಿದೆ? ನಿನ್ನೆಯ ಕರಾಳ ರಾತ್ರಿಯಲ್ಲಿ ಒಂದು ಗುಂಪಿನೆದುರು ಒಬ್ಬಾಕೆ ಹೆಣ್ಣು ಏನು ಮಾಡಲು ಸಾಧ್ಯವಿತ್ತು? ಇವರಿಗೆ ಈಗ ಪ್ರೀತಿ ಬೇಕು; ಚಿಕಿತ್ಸೆ ಬೇಕು. ದಯವಿಟ್ಟು ಕೊಡಿಸಿ ಎಂದ. ಅದಕ್ಕವನು – ಅವಳಿಗೆ ಬೇಕಾದುದೆಲ್ಲವನ್ನೂ ಕೊಟ್ಟು ನೀನೇ ಇಟ್ಟುಕೋ ಎಂದುಬಿಟ್ಟ."

ಆ ವ್ಯಕ್ತಿ ನಿಡುಸುಯ್ದ.

"ಆಮೇಲೇನಾಯಿತು?"